**ಶ್ರೀ ರಾಮನಗೌಡ ಇವರು ಸರ್ವೆ.ನಂ-407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 4 ಎಕರೆ ಪ್ರದೇಶದಲ್ಲಿ ವಾರ್ಷಿಕ 3,325 ಕ್ಯೂಮೀ ಸಾಮರ್ಥ್ಯದ ಬೂದು ಗ್ರಾನೈಟ್ ಉದ್ದೇಶಿತ ಗಣಿಗಾರಿಕೆಯ ಯೋಜನೆಯ ಕುರಿತು ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.**

**ದಿನಾಂಕ: 05-03-2021.**

**ಸಮಯ: ಬೆಳಿಗ್ಗೆ 11.30 ಘಂಟೆ.**

**ಸ್ಥಳ: ಯೋಜನಾ ಸ್ಥಳ**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಸರ್ವೆ.ನಂ-407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ-4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | ಅನುಬಂಧ-5 |

**ಪೀಠಿಕೆ:**

ಶ್ರೀ ರಾಮನಗೌಡ ಇವರು ಸರ್ವೆ.ನಂ-407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 4 ಎಕರೆ ಪ್ರದೇಶದಲ್ಲಿ ವಾರ್ಷಿಕ 3,325 ಕ್ಯೂಮೀ ಸಾಮರ್ಥ್ಯದ ಬೂದು ಗ್ರಾನೈಟ್ ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಜಾರಿಗೊಳಿಸಿರುವ ದಿನಾಂಕ : 14.09.2006 (ತಿದ್ದುಪಡಿ ದಿನಾಂಕ :01.12.2009)ರ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯಂತೆ ಶ್ರೀ ರಾಮನಗೌಡ ಇವರು ಸರ್ವೆ.ನಂ-407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 4 ಎಕರೆ ಪ್ರದೇಶದಲ್ಲಿ ವಾರ್ಷಿಕ 3,325 ಕ್ಯೂಮೀ ಸಾಮರ್ಥ್ಯದ ಬೂದು ಗ್ರಾನೈಟ್ ಉದ್ದೇಶಿತ ಗಣಿಗಾರಿಕೆಯ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

ಸದರಿ ಯೋಜನೆಗೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧೀಕಾರ, ಕರ್ನಾಟಕ (SEIAA, Karnataka) ಇವರ Terms Of Reference ಪತ್ರದ ಸಂಖ್ಯೆ: SEIAA 742 MIN 2019, ದಿನಾಂಕ: 29.02.2020 ಮತ್ತು ದಿನಾಂಕ: 01.12.2020 ರಂದು ಉದ್ದಿಮೆಯವರು ನೀಡಿದ ನಿವೇದನೆ ಪತ್ರದ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಸಾರ್ವಜನಿಕ ಪರಿಸರ ಸಭೆಯನ್ನು ದಿನಾಂಕ: 05.03.2021 ರಂದು ಸದರಿ ಯೋಜನೆಯ ಯೋಜನಾ ಸ್ಥಳ, ಸರ್ವೆ.ನಂ-407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ (Video Conference ಮೂಲಕ) ನಡೆಸಲಾಯಿತು.

ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅನ್ವಯ ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ 30 ದಿನಗಳ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪತ್ರಿಕೆಗಳಾದ "ಪ್ರಜಾವಾಣಿ" (ಕನ್ನಡ), " ದಿ ಹಿಂದೂ" (ಆಂಗ್ಲ) ಭಾಷೆಯಲ್ಲಿ ದಿನಾಂಕ: 02.02.2021 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ "ಸುದ್ದಿಮೂಲ" ದಿನ ಪತ್ರಿಕೆಯಲ್ಲಿ ದಿನಾಂಕ: 03.02.2021 ಪತ್ರಿಕಾ ಪ್ರಕಟಣೆಗಳನ್ನು ರಂದು ನೀಡಲಾಗಿತ್ತು ಹಾಗೂ ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಮುಂದುವರೆದು, ಸದರಿ ಯೋಜನೆಯ ಕರಡು ಪರಿಸರ ಆಘಾತ ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಈ ಕೆಳಕಂಡ ಕಛೇರಿಗಳಲ್ಲಿ ಸಾರ್ವಜನಿಕರ ಪರಾಮರ್ಷೆಗೆ ಇಡಲಾಗಿತ್ತು.

1) ಜಿಲ್ಲಾಧಿಕಾರಿಗಳ ಕಾರ್ಯಲಯ, ರಾಯಚೂರು.
2) ಜಿಲ್ಲಾ ಪಂಚಾಯತ್ ಕಾರ್ಯಾಲಯ, ರಾಯಚೂರು.
3) ಜಿಲ್ಲಾ ಕೈಗಾರಿಕಾ ಕೇಂದ್ರ. ರಾಯಚೂರು.
4) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು.
5) ಪುರಸಭೆ, ಮುದುಗಲ್, ಲಿಂಗಸೂಗೂರು ತಾಲ್ಲೂಕು.
6) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಬೆಂಗಳೂರು.
7) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.

ಮೊದಲಿಗೆ, ಶ್ರೀ. ಎಂ.ಶ್ರೀಧರ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು ಇವರು ಶ್ರೀ. ಆರ್. ವೆಂಕಟೇಶ್ ಕುಮಾರ್, ಭಾ.ಆ.ಸೇ. ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರುತ್ತಾ ಸಭೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಮುಂದುವರೆದು, ಶ್ರೀ. ರಾಜಶೇಖರ್ ಡಂಬಳ ಕ.ಆ.ಸೇ., ಉಪ ವಿಭಾಗಾಧಿಕಾರಿಗಳು, ಲಿಂಗಸೂಗೂರು, ಶ್ರೀ. ಚಾಮರಾಜ.ಹ.ಪಾಟೀಲ್, ತಹಶೀಲ್ದಾರರು, ಲಿಂಗಸೂಗೂರು ತಾಲ್ಲೂಕು ಮತ್ತು ಶ್ರೀ. ಕೆ. ರಾಜು, ಹಿರಿಯ ಪರಿಸರ ಅಧಿಕಾರಿ, ವಲಯ ಕಛೇರಿ, ಕ.ರಾ.ಮಾ.ನಿ.ಮಂ, ಬಳ್ಳಾರಿ ಇವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು ಮತ್ತು ಮಾಧ್ಯಮ ಪ್ರತಿನಿಧಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ ಇಡಲಾಗಿತ್ತು ಎಂದು ತಿಳಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಮಾನ್ಯ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಶ್ರೀ. ರಾಮನಗೌಡ ಇವರು ಸರ್ವೆ.ನಂ–407/4, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 4 ಎಕರೆ ಪ್ರದೇಶದಲ್ಲಿ ಬೂದು ಗ್ರಾನೈಟ್ ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿದ್ದರಿಂದ ಇಲ್ಲಿ ಪರಿಸರ ಆಲಿಕೆ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಕಾನೂನು ಪ್ರಕಾರ ಇದನ್ನು

ರೈತರ ಮತ್ತು ಸಾರ್ವಜನಿಕರ ಅಭಿಪ್ರಾಯಗಳನ್ನು ದಾಖಲೆ ಮಾಡಿ SEIAA (State Level Environment Impat Assesment Authority) ಇವರಿಗೆ ವರದಿ ಕಳುಹಿಸುತ್ತೇವೆ. SEIAA ದವರು ಇದಕ್ಕೆ ಸಂಬಂಧಪಟ್ಟಂತೆ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರೆ. ಈ ಸಭೆಯಲ್ಲಿ ಭಾಗವಹಿಸಿರುವ ಸುತ್ತಮುತ್ತಲಿನ ಸಾರ್ವಜನಿಕರು ತಮ್ಮ ಅನಿಸಿಕೆ/ಅಭಿಪ್ರಾಯಗಳನ್ನು ತಿಳಿಸಿ ಎಂದು ಸೂಚಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳವರ ಒಪ್ಪಿಗೆಯ ಮೇರೆಗೆ, ಶ್ರೀ. ಶ್ರೀಧರ್. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಇವರು ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರಿಸುವಂತೆ ಯೋಜನಾ ಪ್ರವರ್ತಕರಿಗೆ ತಿಳಿಸಿದರು. ಯೋಜನೆಯ ಪರಿಸರ ಸಲಹೆಗಾರರಾದ ಮೆಃ ಎ.ಎಮ್. ಎನ್ವಿರೋ ಇಂಜಿನಿಯರ್ಸ್, ಬೆಂಗಳೂರು ಇವರು ಯೋಜನೆಯ ವಿವರಗಳನ್ನು ಹಾಗೂ ಉದ್ದೇಶಿತ ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳ ಬಗ್ಗೆ ಶಕ್ತಿ ಬಿಂದು ಪ್ರದರ್ಶನದ (Power Point Presentation) ಮೂಲಕ ಸಭೆಗೆ ವಿವರಿಸಿದರು. ಸದರಿ ಶಕ್ತಿ ಬಿಂದು ಪ್ರದರ್ಶನದ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು/ಅಭಿಪ್ರಾಯಗಳು/ಆಕ್ಷೇಪಗಳು ಈ ಕೆಳಗಿನಂತಿವೆ.

**1. ಶ್ರೀ. ದಾವೂದ್ ಸಾಬ್, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು :-**

ಈ ಭೂಮಿಯು ಬೆಳೆ ಬೆಳೆಯಲು ಯೋಗ್ಯವಿರುವುದಿಲ್ಲ ಹಾಗೂ ಸುತ್ತಮುತ್ತ ಕ್ವಾರಿಗಳು ಇರುವುದರಿಂದ ಇಲ್ಲಿ ಗಣಿಗಾರಿಕೆ ಮಾಡಲು ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ಆದ್ದರಿಂದ ತಾವು ಈ ಯೋಜನೆಯನ್ನು ಕೈಗೊಳ್ಳಲು ಅನುಮೋದಿಸಬಹುದಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**2. ಶ್ರೀ. ಶಶಿಕಾಂತ್ ಅಂಗಡಿ, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು :-**

ಈ ಗಣಿಗಾರಿಕೆಯನ್ನು ಮಾಡುವುದರಿಂದ ಒಳ್ಳೆಯದಾಗುತ್ತದೆ ಮತ್ತು ಇಲ್ಲಿನ ಕೂಲಿಕಾರ್ಮಿಕರಿಗೆ ಕೆಲಸ ಸಿಗುತ್ತದೆ ಹಾಗೂ ಗಣಿಗಾರಿಕೆಯಿಂದ ನಮಗೆ ಯಾವುದೇ ತೊಂದರೆಯಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

**3. ಶ್ರೀ. ವಿ.ಸುನಂದಾ ರೆಡ್ಡಿ, ಪರಿಸರವಾದಿ :-**

ಉದ್ದೇಶಿತ ಉದ್ದಿಮೆಯನ್ನು ಪೂರ್ಣ ಹೃದಯದಿಂದ ಬೆಂಬಲಿಸುತ್ತೇನೆ. ಏಕೆಂದರೆ ಭಾರತದಲ್ಲಿ 18 ರಿಂದ 35 ವರ್ಷದೊಳಗಿನ ಸುಮಾರು 40 ಕೋಟಿ ಯುವಕರು ಉದ್ಯೋಗ ಅವಕಾಶಗಳಿಗಾಗಿ ಕಾಯುತ್ತಿದ್ದಾರೆ. ಅದೇ ಸಮಯದಲ್ಲಿ ಪರಿಸರ ಸಮತೋಲನವನ್ನು ರಕ್ಷಿಸಲು ಇಲ್ಲಿ ಹೆಚ್ಚಿನ ಅವಶ್ಯಕತೆ ಇದೆ. ಇಲ್ಲಿ ನಮ್ಮ ಪರಿಸರ ಸಮತೋಲನ ಅಭಿವೃದ್ಧಿಯನ್ನು ಕಾಪಾಡಿಕೊಳ್ಳಲು ನಾನು ನಿಮಗೆ ಕೆಲವು

ಸಲಹೆಗಳನ್ನು ನೀಡುತ್ತಿದ್ದೇನೆ. ನಿಮ್ಮ ಪರಿಸರ ಸಲಹೆಗಾರರು ವಾಯು, ನೀರು, ಭೂಮಿ ಮತ್ತು ಕ್ವಾರಿಯ ಬೇಸ್‌ಮೆಂಟ್ ಸಮೀಕ್ಷೆಯನ್ನು ನಡೆಸಿದ್ದಾರೆ. ಜನರ ಆರೋಗ್ಯ ಸ್ಥಿತಿಯನ್ನು, ಬೆಳೆ ಉತ್ಪಾದನಾ ಸ್ಥಿತಿ ಮತ್ತು ಅಂತರ್ಜಲ ಲಭ್ಯತೆಯ ಸ್ಥಿತಿಯನ್ನು 10 ಕಿ.ಮೀ ವ್ಯಾಪ್ತಿಯಲ್ಲಿ ಸಂಗ್ರಹಿಸುವುದು ಭವಿಷ್ಯತ್ತಿನಲ್ಲಿ ತುಂಬಾ ಉಪಯುಕ್ತವಾಗಿರುತ್ತದೆ ಮತ್ತು ಪರಿಸರ ಸಮತೋಲನವನ್ನು ಕಾಪಾಡಿಕೊಳ್ಳಲು ಮತ್ತು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಲು 4 ಎಕರೆ ಭೂಮಿಯನ್ನು ಹೊಂದಿದ್ದು, ನನ್ನ ವಿನಂತಿ ಏನೆಂದರೆ ಮಳೆ ನೀರಿಗಾಗಿ ಇಂಗು ಗುಂಡಿ ವ್ಯವಸ್ಥೆ ಮಾಡಿ ಹಾಗೂ ಸಂಗ್ರಹಣಾ ತೊಟ್ಟಿಗಳನ್ನು ನಿರ್ಮಿಸಿ. ಈ ನೀರಿನಿಂದ ನಿಮ್ಮ ಉದ್ದಿಮೆಗೆ ಉಪಯೋಗಿಸುತ್ತಾ ಮತ್ತು ಈ ಪ್ರದೇಶದಲ್ಲಿ ಅಂತರ್ಜಲ ಮಟ್ಟದಲ್ಲಿ ಅಭಿವೃದ್ಧಿಯನ್ನು ಸಂಗ್ರಹಿಸಿ ಮಳೆ ನೀರು ನಿಮ್ಮ ಉದ್ದಿಮೆಗೆ ಅಲ್ಲದೇ ಅಲ್ಲಿಯ ಹಳ್ಳಿಗಳಿಗೆ, ತೋಟಗಳಿಗೆ ಉಪಯುಕ್ತವಾಗುತ್ತದೆ. ನಿಮ್ಮ ಉದ್ದಿಮೆಯಲ್ಲಿಯ ಉದ್ಯೋಗಗಳಿಗೆ ಸ್ಥಳೀಯ ನಿರುದ್ಯೋಗಿಗಳಿಗೆ ಮೊದಲ ಆದ್ಯತೆಯನ್ನು ನೀಡಿ. ನಿಮಗೆ ನನ್ನ ನಮ್ರ ವಿನಂತಿಯೆನೆಂದರೆ ನಿಮ್ಮ ಉದ್ದಿಮೆಯಲ್ಲಿ ಉದ್ಯೋಗಗಳನ್ನು ಪಡೆಯಲು ಉತ್ತಮ ಕೌಶಲ್ಯಗಳನ್ನು ಹೊಂದಿದ ನಿರುದ್ಯೋಗಿಗಳಿಗೆ ಉತ್ತಮ ಅಭಿವೃದ್ಧಿ ಕೌಶಲ್ಯ ತರಬೇತಿಯ ಪ್ರಕಾರ ವಿವಿಧ ಯುವ ಯೋಜನೆಗಳ ಪ್ರಕಾರ ಉದ್ಯೋಗಗಳನ್ನು ಪಡೆಯಲು ಭಾರತ CSR Budget ಗಾಗಿ ಕ್ರಿಯಾ ಯೋಜನೆಯನ್ನು ಗ್ರಾಮಸ್ಥರು, ನಿಮ್ಮ ಕಂಪನಿ ಅಧಿಕಾರಿಗಳು, ಸರ್ಕಾರಿ ಅಧಿಕಾರಿಗಳು, ಮಾಲಿನ್ಯ ನಿಯಂತ್ರಣ ಅಧಿಕಾರಿಗಳು ಒಂದು ಸಮನ್ವಯ ಸಮಿತಿಯನ್ನು ರಚಿಸಲು ನನ್ನ ವಿನಂತಿ. ಇದು ಪರಿಣಾಮಕಾರಿ ಹಾಗೂ ಆದರ್ಶ ಪೂರ್ವಕವಾಗಿರುತ್ತದೆ. ದಯವಿಟ್ಟು ಸರಿಯಾದ ಮಾಲಿನ್ಯ ನಿಯಂತ್ರಣ ಕ್ರಮವನ್ನು ತೆಗೆದುಕೊಳ್ಳಿ. ವಾಯು, ನೀರು, ಭೂಮಿ ಮತ್ತು ಪರಿಸರ ಸಮತೋಲನ ಬಹಳ ಅವಶ್ಯಕ. ನಿಮ್ಮ ಉದ್ದಿಮೆಯ ಅಭಿವೃದ್ಧಿಗೆ ಮತ್ತೊಮ್ಮೆ ನನ್ನ ಶುಭಾಶಯಗಳು ಮತ್ತು ಬೆಂಬಲ ಹಾಗೂ ನಿಮ್ಮ ಯೋಜನೆಗಾಗಿ ವಿವರವಾದ EIA ವರದಿಯನ್ನು ಸಿದ್ಧಪಡಿಸಿದ ನಿಮ್ಮ ಪರಿಸರ ಸಲಹೆಗಾರನ್ನು ನಾನು ಅಭಿನಂದಿಸುತ್ತಿದ್ದೇನೆ. ಇದು ತುಂಬಾ ಒಳ್ಳೆಯದು ಹಾಗೂ ತೃಪ್ತಿಕರವಾದದ್ದು. ಅಂತಿಮವಾಗಿ ನಾನು ಈ ಉದ್ಯಮಕ್ಕೆ ಅನುಮತಿ ನೀಡಲು Ministry of Environment, Forest & Climate Change ಅನ್ನು ವಿನಂತಿಸುತ್ತೇನೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

4. **ಶ್ರೀ. ಪರಶುರಾಮ್, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು :-**

ಈ ಗಣಿಗಾರಿಕೆಯು ಮುಖ್ಯವಾಗಿ ಬೇಕೆಬೇಕು. ಏಕೆಂದರೆ ಇಲ್ಲಿ ನಮ್ಮಂಥ ನಿರುದ್ಯೋಗಿ ಯುವಕರಿಗೆ ಅವಶ್ಯಕತೆ ಇದೆ, ಇದರಿಂದ ಇಲ್ಲಿನ ಸಾವಿರಾರು ಜನರಿಗೆ ಕೆಲಸ ಸಿಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

5. **ಶ್ರೀ. ಬಸವರಾಜ, ಮುದುಗಲ್ ಗ್ರಾಮ, ಲಿಂಗಸೂಗೂರು ತಾಲ್ಲೂಕು :-**

ಇಲ್ಲಿ ಗಣಿಗಾರಿಕೆ ಪ್ರಾರಂಭ ಮಾಡುವುದರಿಂದ ಮುದಗಲ್‌ನ ನಿತ್ಯ ಉದ್ಯೋಗ ಗಣಿಗಾರಿಕೆಯಾಗಿರುತ್ತದೆ. ಇದರಿಂದ ನಿರುದ್ಯೋಗದ ಸಮಸ್ಯೆ ಅರ್ಧ ಹೋಗಲಾಡುತ್ತದೆ ಮತ್ತು ಇದರಿಂದ ಸರ್ಕಾರಕ್ಕೆ ರಾಜಧನವು ಕೂಡ ಹೆಚ್ಚಿಗೆ ಬರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

6. **ಶ್ರೀಮತಿ. ಮಂಜುಳಾ, ಚಿತ್ರದುರ್ಗ :-**

ನಮ್ಮ ಕಡೆಯಿಂದ ಉದ್ದಿಮೆಗೆ ಯಾವುದೇ ವಿರೋಧವಿಲ್ಲ. ಸುಮಾರು 20 ಕ್ವಾರಿಗಳು ಇದ್ದರೂ ಸಹ ಅದರಿಂದ ಯಾವುದೇ ರೀತಿಯ ಕುಂದು ಕೊರತೆಗಳಿಲ್ಲ. ಅವರಿಗೆ ಸಂಪರ್ಕ ಮಾಡಿದರೆ ಅವರು ನಮಗೆ ಸ್ಪಂದಿಸುತ್ತಾರೆ ಎಂದು ಹೇಳಿಕೊಂಡು ಬಂದಿದ್ದಾರೆ. ಇದಕ್ಕೆ ನಾವು ಬೆಂಬಲಿಸುತ್ತೇವೆ. ಜನರ ಕಷ್ಟಕ್ಕೆ ಇವರು ಸ್ಪಂದಿಸಿದರೆ ಸ್ಥಳೀಯರು ಯಾವಾಗಲೂ ಅವರನ್ನು ಬೆಂಬಲಿಸುತ್ತಾರೆ ಮತ್ತು ಹೆಚ್ಚಾಗಿ ಗಿಡಗಳನ್ನು ಬೆಳೆಸಬೇಕಾಗುತ್ತದೆ ಹಾಗೂ ಉದ್ಯೋಗಿಗಳಿಗೆ Safety Measures ನೀಡಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಈ ಕೆಳಕಂಡ ಸಂಘಗಳು ಉದ್ದೇಶಿತ ಯೋಜನೆಯನ್ನು ಪತ್ರದ ಮೂಲಕ ಬೆಂಬಲಿಸಿದರು. ಪ್ರತಿಗಳನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

1. M/s. Neethaa Swachanda Seva Society , Kurnool-518001, AP (Regd : KNL/1967/2017).
2. M/s. Sadguru Ramakrishna Paramahamsa, Rural Development Society (NGO) (Regd : 424/1993).
3. M/s. G.K. Education and Rural Urban Development Society (SOR No: CDG-SO 245-1991-92).
4. M/s. Chaitanya Rural Development Society.
5. M/s. Shakthi Enviroment Rural Development Society (Regd No : 403/2018).
6. M/s. Dharithri Paryavarana Parirakshana Samstha, H.No. 6-7-414, Shivaji Nagar, Nalgonda Dist-508001, Telangana State.

ಸಾರ್ವಜನಿಕ ಸಭೆಯ ನಡುವಳಿಯನ್ನು ಚಿತ್ರೀಕರಿಸಲಾಯಿತು ಮತ್ತು ಛಾಯಾ ಚಿತ್ರಗಳನ್ನು ತೆಗೆಯಲಾಯಿತು. ಛಾಯಾ ಚಿತ್ರಗಳನ್ನು **ಅನುಬಂಧ-7** ರಲ್ಲಿ ಹಾಗೂ ಚಿತ್ರೀಕರಣದ ಸಿಡಿ (CD) ಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಧನ್ಯವಾದವನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಜಿಲ್ಲಾಧಿಕಾರಿಗಳು ಮತ್ತು**
**ಜಿಲ್ಲಾ ದಂಡಾಧಿಕಾರಿಗಳು ಮತ್ತು**
**ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು,**
**ರಾಯಚೂರು**